# ಹೊಸ ವಾಹಿನಿ Kalki ಕನ್ನಡ

ಕನ್ನಡ ರಾಜ್ಯೋತ್ಸವಕ್ಕೆ ಕಲ್ಕಿ ಎಂಬ ಮತ್ತೊಂದು ಮನರಂಜನಾ ವಾಹಿನಿ ಸೇರ್ಪಡೆಯಾಗಿದೆ.

ಬದಲಾಗುತ್ತಿರುವ ಜನರ ಅಭಿರುಚಿ, ಕಲೆ, ಸಂಸ್ಕೃತಿ ಹಾಗು ಕನ್ನಡಿಗರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಕೊಡುಗೆ 'ಕಲ್ಕಿ' ಕನ್ನಡದ ಮನರಂಜನಾ ವಾಹಿನಿ.

ಹೊಸತನ...ಹೊಸ ಯೋಚನೆ ಹಾಗೂ ವಿಭಿನ್ನ ಮನರಂಜನೆ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ನೀಡುವುದು ಮುಖ್ಯ ಗುರಿಯಾಗಿದೆ ಎನ್ನುತ್ತಾರೆ ವೈಟ್ ಹಾರ್ಸ್ ನೆಟ್‌ವರ್ಕ್ ಸರ್ವೀಸಸ್ ಸಂಸ್ಥೆಯ ಸಂಸ್ಥಾಪಕರು ಹಾಗೂ ವ್ಯವಸ್ಥಾಪಕ ನಿರ್ದೇಶಕ ಪಿ.ಕೈಲಾಸಂ ರವರು. ಈಗಾಗಲೇ ಕರ್ನಾಟಕದಲ್ಲಿ ಸಾಕಷ್ಟು ಮನರಂಜನೆ ವಾಹಿನಿಗಳು ಇದ್ದು ದೊಡ್ಡ ಮಟ್ಟದ ಸ್ಪರ್ಧೆಯನ್ನು ನೀಡುತ್ತಿವೆ. ಇಂತಹ ಒಂದು ಸ್ಪರ್ಧೆಗೆ ಸ್ಪರ್ಧಿಯಾಗಿ ಸಿದ್ಧವಾಗಿದೆ ಕಲ್ಕಿ ಕನ್ನಡ. ಇಲ್ಲಿ ಹೊಸ ತಂತ್ರಜ್ಞಾನಗಳಿಂದ ಕೂಡಿದ ಉಪಕರಣಗಳು, ಕರ್ನಾಟಕದ ಕಿರುತೆರೆಯ ಇತಿಹಾಸದಲ್ಲಿ ಮೊದಲ ಬಾರಿಗೆ ಹೆಚ್.ಡಿ ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ಕಿರುತೆರೆಯ ಮೇಲೆ ತರುತ್ತಿದೆ. ಕಳೆದ 3-4 ತಿಂಗಳಿನಿಂದ ಸಂಪೂರ್ಣ ಸಿದ್ಧತೆಯೊಂದಿಗೆ ಅಂದರೆ ವೀಕ್ಷಕರ ನಾಡಿಮಿಡಿತವನ್ನು ಅರಿಯುವ ಸಲುವಾಗಿ ಎಲ್ಲ ಜಿಲ್ಲೆಗಳಲ್ಲಿ ಒಂದುತಂಡವನ್ನು ರಚಿಸಿ ಜನರು ಇಷ್ಟಪಡುವ ಕಾರ್ಯಕ್ರಮಗಳನ್ನು ನೀಡುವ ಚಿಂತನೆ ಜೊತೆಗೆ ಸ್ಪರ್ಧಾತ್ಮಕ ವಾಹಿನಿಗಳಿಗಿಂತಲೂ ವಿಭಿನ್ನ ರಿತಿಯಲ್ಲಿ ನಮ್ಮ ಮನರಂಜನಾ ಕಾರ್ಯಕ್ರಮಗಳನ್ನು ಎಲ್ಲ ವರ್ಗದ ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಕುಟುಂಬ ಸಮೇತರಾಗಿ ನೋಡುವಂತಹ ಅದ್ದೂರಿತನದ ರಿಯಾಲಿಟಿ ಶೋಗಳು, ಮನಮಿಡಿಯುವ ಧಾರವಾಹಿಗಳು ಬರಲಿವೆ ಎನ್ನುತ್ತಾರೆ.

**ಜನರು ಇಷ್ಟಪಡುವ ಕಾರ್ಯಕ್ರಮಗಳನ್ನು ನೀಡುವ ಚಿಂತನೆ ಜೊತೆಗೆ ಸ್ಪರ್ಧಾತ್ಮಕ ವಾಹಿನಿಗಳಿಗಿಂತಲೂ ವಿಭಿನ್ನ ರೀತಿಯಲ್ಲಿ ನಮ್ಮ ಮನರಂಜನಾ ಕಾರ್ಯಕ್ರಮಗಳನ್ನು ಎಲ್ಲ ವರ್ಗದ ವೀಕ್ಷಕರಿಗೆ ನೀಡುವುದು ನಮ್ಮ ಮುಖ್ಯ ಉದ್ದೇಶವಾಗಿದೆ**

ಧಾರ್ಮಿಕ, ಆಧ್ಯಾತ್ಮಿಕ, ಚಿಂತನೆಗಳೊಂದಿಗೆ ಭಗವಂತನ ದರ್ಶನ, ಭಾವನೆಗಳಿಗೆ ಜೀವತುಂಬುವ, ಕಲ್ಪನೆಗೂ ಮೀರಿದ ಕಥೆಗಳು/ ಧಾರವಾಹಿಗಳು, ಹಾಗು ನಾನ್ ಫಿಕ್ಷನ್.... ಅದ್ದೂರಿ ಸೆಟ್, ಭರ್ಜರಿ ರಿಯಾಲಿಟಿ ಶೋಗಳು, ಅದರಲ್ಲಿ ಸಿಂಗಿಂಗ್, ಡ್ಯಾನ್ಸಿಂಗ್, ಕಾಮಿಡಿ, ಹೀಗೆ ನಾನಾ ತರಹದ ರಿಯಾಲಿಟಿ ಶೋಗಳ ಮೂಲಕ ಹೊಸ ಪ್ರತಿಭೆಗಳನ್ನು ಹೆಕ್ಕಿ ತೆಗೆಯುವ ಒಂದು ವೇದಿಕೆ. ಕಿರುತೆರೆಯಲ್ಲಿ ಮೊಟ್ಟಮೊದಲ ಬಾರಿಗೆ ಹರಕೆ ಎಂಬ ಕಾರ್ಯಕ್ರಮ ಬರಲಿದೆ. ಇಲ್ಲಿ ನೀವು ಹೊತ್ತಿರುವ ಹರಕೆಗೆ ಕಲ್ಕಿ ಕನ್ನಡ ವಾಹಿನಿಯಿಂದ ನೀವು ಇಚ್ಛಿಸುವ ದೇವಾಲಯಗಳಿಗೆ ಹೋಗಿ ನಿಮ್ಮ ಹರಕೆಯನ್ನು ಈಡೇರಿಸಿಕೊಡುತ್ತದೆ ಹರಕೆ. ಹೀಗೆ ಸಾಲು ಸಾಲಾಗಿ ವೀಕ್ಷಕರ ನಾಡಿಮಿಡಿತವನ್ನು ಅರಿತು ವೈವಿಧ್ಯಮಯ ಹಾಗೂ ಸ್ವಂತಿಕೆಯ ಮನರಂಜನೆಯ ಕಾರ್ಯಕ್ರಮಗಳನ್ನು ನೀಡುತ್ತೇವೆ ಎನ್ನುತ್ತಾರೆ ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಬಾಲ್‌ರಾಜ್ ನಾಯ್ಡು.







## ಕಲ್ಕಿ ಕನ್ನಡ ವಾಹಿನಿಯ ವೈಶಿಷ್ಟ್ಯಗಳು

### ಅನುಬಂಧ

ವಯಸ್ಸಿನ ಅಂತರವಿಲ್ಲದೆ ಸ್ನೇಹಿತರಾಗುವ ಅಪ್ಪ - ಅಮ್ಮಂದಿರು, ಆ ಸ್ನೇಹ ಬಾಂಧವ್ಯದ ಕಥೆಯ ಜೊತೆಗೆ ಪ್ರೀತಿ ಒಲ್ಲದವನ ಬಾಳಲ್ಲಿ ಸೂರ್ಯಕಾಂತಿ ಅನಿವಾರ್ಯವಾಗಿ ಕಣ್ಣಾಲೆಯ ಮುಖವಾಡ ಹಾಕಿ ಪ್ರೀತಿಯನ್ನು ಪಡೆದುಕೊಳ್ಳುವ ಕಥೆ. ಇಂತಹ ಒಂದು ಕಥಾಹಂದರದದೊಂದಿಗೆ ಸೋಮವಾರ ದಿಂದ ಶುಕ್ರವಾರ ಸಂಜೆ 6 ಗಂಟೆಗೆ.

### ಅಮ್ನೋರು

ಎಲ್ಲರನ್ನು ಸಾಕಿ ಸಲಹೋಕೆ ತಾಯಿ ಇರ್‍ತಾಳೆ - ಜೀವನವನ್ನು ನಾಶ ಮಾಡೋಕೆ ಕೊಲ್ಲೋಕೆ ದುಷ್ಟ ಶಕ್ತಿಗಳು ಹೊಂಚು ಹಾಕುತ್ತವೆ, ದುಷ್ಟ ಶಕ್ತಿಯಿಂದ ದೊಡ್ಡಮನೆಯ ನಂದಾದೀಪ ಆರುತ್ತಾ?...ಇವಳು ಆಸರೆ ಆಗ್ತಾಳಾ? ಅಥವಾ ಬಲ್ತಿರೋ ಭೈರಾಗಿ ಕಾಪಾಡ್ತಾನಾ? ಸಾಮಾಜಿಕ ಪುರಾಣ ಕಥಾ ಹಂದರದೊಂದಿಗೆ ಅಮ್ನೋರು ಸೋಮವಾರ ದಿಂದ ಶುಕ್ರವಾರ ಸಂಜೆ 6:30 ಕ್ಕೆ

### ಸೇವಂತಿ ಸೇವಂತಿ

ಇಲ್ಲಿ ಪ್ರೀತಿ ಸಂಬಂಧಗಳ ಮೌಲ್ಯವಿದೆ, ಸ್ವಾರ್ಥವೂ ಇದೆ, ಸಾಧಿಸುವ ಛಲ ಸಮಾಜಕ್ಕೆ ಅರಿವಿನ ಸಂದೇಶವಿದೆ. ಪ್ರತಿಭಾವಂತರ ಯುವಕರ ತಂಡ ವೀಕ್ಷಕರಿಗಾಗಿ ವಿಭಿನ್ನ ಕಥೆಯೊಂದು ಹೆಣೆದಿದೆ, ತನ್ನ ಸುತ್ತ ಸುತ್ತುವ ಸಮಸ್ಯೆಗಳ ಸರಮಾಲೆಯಲ್ಲಿ ಮಿಂದೇಳುವ ನಾಯಕಿ. ಸಮಸ್ಯೆಗಳು ಇಲ್ಲದಿದ್ರೂ ಅವುಗಳನ್ನು ಸೃಷ್ಟಿಸಿಕೊಳ್ಳುವ ನಾಯಕ. ಹೀಗೆ ಇವರಿಬ್ಬರ ಭೇಟಿಯಾದ್ರೆ ಹೇಗಿರುತ್ತೆ. ಪ್ರತಿ ಸೋಮವಾರ ದಿಂದ ಶುಕ್ರವಾರ ರಾತ್ರಿ 7 ಗಂಟೆಗೆ ಪ್ರಸಾರವಾಗುತ್ತಿದೆ ನಿಮ್ಮ ಕಲ್ಕಿ ಕನ್ನಡ ವಾಹಿನಿಯಲ್ಲಿ.

### ಕಲ್ಕಿ ಎಕ್ಸ್‌ಪ್ರೆಸ್

ಜನಪ್ರಿಯ ಕಿರುತೆರೆ ಮತ್ತು ಹಿರಿತೆರೆ ಕಲಾವಿದ ಜಹಾಂಗೀರ್ ನಿರೂಪಣೆಯಲ್ಲಿ ಮೂಡಿ ಬರುತ್ತಿರುವ 'ಕಲ್ಕಿ ಎಕ್ಸ್‌ಪ್ರೆಸ್' ಕಾರ್ಯಕ್ರಮ ರಾಜ್ಯದ 30 ಜಿಲ್ಲೆಗಳಲ್ಲಿ ಸಂಚರಿಸಲಿದ್ದು ಸ್ಥಳೀಯರನ್ನು ರಂಜಿಸಲಿದೆ. ಸ್ಥಳೀಯ ಪ್ರತಿಭೆಗಳಿಗೆ ವೇದಿಕೆಯಾಗಿದೆ. ಈ ಕಾರ್ಯಕ್ರಮ ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 8 ಗಂಟೆಗೆ ಪ್ರಸಾರವಾಗಲಿದೆ.

### ಪದ್ಮೂಸ್ ಕಿಚನ್

ಖ್ಯಾತ ಕಲಾವಿದೆ ಪದ್ಮಜಾರಾವ್ ನಿರೂಪಣೆಯಲ್ಲಿ ಮೂಡಿಬರಲಿರುವ ಪದ್ಮೂಸ್ ಕಿಚನ್ ಅಡುಗೆ ಕಾರ್ಯಕ್ರಮ ಸರಳ ಹಾಗು ರುಚಿಕರವಾದ ಅಡುಗೆಯನ್ನು ಮಧ್ಯಾಹ್ನ ಮಾಡಿ ಬಡಿಸಲಿದ್ದಾರೆ. ಹಿರಿಯ ಪೋಷಕ ನಟ ಶ್ರೀನಿವಾಸಮೂರ್ತಿ ಅಡುಗೆ ಭಟ್ಟರಾಗಿ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿರುವುದು ಈ ಕಾರ್ಯಕ್ರಮದ ವಿಶೇಷ. ಈ ಕಾರ್ಯಕ್ರಮ ಪ್ರತಿ ಸೋಮವಾರ ದಿಂದ ಶುಕ್ರವಾರ ವರೆಗೆ ಮಧ್ಯಾಹ್ನ 12.30ಕ್ಕೆ ಬರಲಿದೆ.

### ಪಾನಿಪುರಿ ವಿತ್ ಮುರಳಿ

ಜನಪ್ರಿಯ ಕಿರುತೆರೆ ನಿರೂಪಕ ಮುರಳಿ ಸಾರಥ್ಯದಲ್ಲಿ ಮೂಡಿಬರಲಿರುವ ಈ ನೇರ ಪ್ರಸಾರ ಕಾರ್ಯಕ್ರಮ ಪ್ರತಿ ಸೋಮವಾರದಿಂದ ಶುಕ್ರವಾರ ಸಂಜೆ 5 ಗಂಟೆಗೆ ಪ್ರಸಾರವಾಗಲಿದೆ. ಕಿರುತೆರೆ ಮತ್ತು ಹಿರಿತೆರೆಯ ಖ್ಯಾತ ಕಲಾವಿದರೊಂದಿಗೆ ಮುರಳಿ ಹರಟೆ ಹೊಡೆಯಲಿದ್ದಾರೆ. ಸ್ವಲ್ಪ ಮಾಹಿತಿ, ಸಿಕ್ಕಾಪಟ್ಟೆ ತಲೆ ಹರಟೆ ಹಾಗು ಮನರಂಜನೆ ಈ ಕಾರ್ಯಕ್ರಮದಲ್ಲಿ ಇರಲಿದೆ. ವೀಕ್ಷಕರು ನೇರವಾಗಿ ಫೋನ್ ಕರೆ ಮಾಡಿ ನಿರೂಪಕರು ಹಾಗು ಅತಿಥಿಗಳೊಂದಿಗೆ ಮಾತನಾಡಬಹುದಾಗಿದೆ.

### ವಿಶ್ವರೂಪ

ಪ್ರತಿದಿನ ಬೆಳಗ್ಗೆ 8 ರಿಂದ 9.30 ಕ್ಕೆ ಸವಿತ್ರು ಶರ್ಮಾ ಗುರೂಜಿ ಅವರಿಂದ ಜನರ ಸಮಸ್ಯೆಗಳಿಗೆ ಪರಿಹಾರೋಪಾಯ. ನೇರ ಪ್ರಸಾರ ಕಾರ್ಯಕ್ರಮ ಇದಾಗಿದ್ದು, ವೀಕ್ಷಕರು ಫೋನ್ ಕರೆ ಮಾಡಿ ಶರ್ಮಾ ಗುರೂಜಿ ಅವರೊಂದಿಗೆ ಮಾತನಾಡಿ ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

### ನಮಸ್ತೆ ಕರುನಾಡು

ಮಂಕುತಿಮ್ಮನ ಕಗ್ಗ ಕನ್ನಡಿಗರಿಗೆ ಅಚ್ಚು ಮೆಚ್ಚು ಜೀವನದಲ್ಲಿ ತೃಪ್ತಿ, ನೆಮ್ಮದಿ, ಅಸಮಾಧಾನ ಇರುವ ಜೀವಗಳಿಗೆ ಮಂಕುತಿಮ್ಮನ ಕಗ್ಗಗಳ ಸ್ಫೂರ್ತಿಯೊಂದಿಗೆ ಅದರ ವಿಶ್ಲೇಷಣೆ ಹಾಗೂ ಜನಪ್ರಿಯ ಗಾಯಕಿ ಅರ್ಚನಾ ಉಡುಪ ದನಿಯಾಗಲಿದ್ದಾರೆ. ಪ್ರತಿ ದಿನ ಬೆಳಗ್ಗೆ 7 ಗಂಟೆಗೆ.

### ಅಭಿಷೇಕ:

ಕರ್ನಾಟಕ ಹಾಗೂ ದೇಶದ ಜನಪ್ರಿಯ ದೇವಸ್ಥಾನಗಳ ದರ್ಶನದೊಂದಿಗೆ 365 ದಿನ ಅಭಿಶೇಕದ ದರ್ಶನವನ್ನು ಪಡೆಯುವ ಅವಕಾಶ. ಪ್ರತಿದಿನ ಬೆಳಗ್ಗೆ 6.30 ಕ್ಕೆ.

ಇನ್ನೂ ಅನೇಕ ಮನರಂಜನೆ ಕಾರ್ಯಕ್ರಮಗಳೊಂದಿಗೆ ಕಲ್ಕಿ ಕನ್ನಡ ಮನೆಮನ ರಂಜಿಸಲು ಸಿದ್ದವಾಗಿದ್ದು, ನೋಡಲು ಸಿದ್ದರಾಗಿರಿ.